2) ಸಿ.ಆರ್.ಎಫ್. ಯೋಜನೆಯಡಿ ಈವರೆಗೆ ಕಳಿಕಂಡ ರಸ್ತೆ ಕಾಮಗಾರಿಗಳು ಮಂಜೂರಾಗಿವೆ. ಸಕಲೇಶಪುರ ಸುಬ್ರಮಣ್ಯ ರಸ್ತೆ ರೂ. 72.95 ಲಕ್ಷ ಶ್ರೀರಂಗಪಟ್ಟಣ ಚನ್ನರಾಯಪಟ್ಟಣ ಅರಸೀಕೆರೆ ರಸ್ತೆಯ ಕಿ.ಮೀ 29.95 ಲಕ್ಷದುದ್ದ ಭಾಗೇಶ್ವರ ಅರಸೀಕೆರೆ ರಸ್ತೆ ರೂ. 47.60 ಲಕ್ಷ.

ಬೇಲೂರು ತಾಲ್ಲೂಕಿಗೆ ವಕ್ಫ್ ಮಂಡಳಿ ನೀಡಿರುವ ಹಣ.

2260(2690) ಶ್ರೀ ಪುಟ್ಟರಂಗನಾಥ್ ಎಸ್.ಹೆಚ್. (ಬೇಲೂರು) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1 ಬೇಲೂರು ತಾಲ್ಲೂಕಿಗೆ ವಕ್ಫ್ ಮಂಡಳಿಯಿಂದ ಇದುವರೆವಿಗೆ ನೀಡಿರುವ ಹಣವೆಷ್ಟು?

ಶ್ರೀ ಎ. ಎಮ್. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

1. ಹಿಂದಿನ ಮೂರು ವರ್ಷಗಳಲ್ಲಿ ಬೇಲೂರು ತಾಲ್ಲೂಕಿನ ವಕ್ಫ್ ಸಂಸ್ಥೆಗಳಿಗೆ ಮಂಜೂರು ಮಾಡಿರುವ ಅನುದಾನ ಹಣದ ವಿವರ ಈ ಕೆಳಕಂಡಂತಿದೆ.

ವರ್ಷ	ವಕ್ಫ್ ಸಂಸ್ಥೆಗಳ ಸಂಖ್ಯೆ	ಮೊತ್ತ ರೂ.
1998-99	02	20,000-00
1999-2000	05	1,05,000-00
2000-2001	04	95,000-00
ಒಟ್ಟು	11	2,20,000-00

ಬೇಲೂರು ತಾಲ್ಲೂಕಿನಲ್ಲಿ ರಸ್ತೆ ಅಭಿವೃದ್ಧಿ.

2261(2691) ಶ್ರೀ ಪುಟ್ಟರಂಗನಾಥ್ ಎಸ್.ಹೆಚ್. (ಬೇಲೂರು) :— ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1. ಪ್ರವಾಸೋದ್ಯಮದ ಅಭಿವೃದ್ಧಿಗೆ ಬೇಲೂರು, ತಾಲ್ಲೂಕಿನ ಬೇಲೂರು-ಹಳೇಬೀಡು, ಹಳೇಬೀಡು-ಹಗರೆ ಮತ್ತು ಹಗರೆ-ಬೇಲೂರು ರಸ್ತೆಯ ಅಭಿವೃದ್ಧಿಗೆ ರೂ.೭.೫೦ ಲಕ್ಷ ರೂಪಾಯಿ ಪ್ರಸ್ತಾವನೆ ಸಲ್ಲಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ ಕೈಗೊಂಡಿರುವ ಕ್ರಮವೇನು?